ದೂರವಾಣಿ/Phone: (O) :08254-230349
(Fax) : 08254 -232720
E-mail: *dcfknd@aranya.gov.in*
ಸ್ಥಳ: ಕುಂದಾಪುರ – 576201
Place: Kundapura - 576201

**ಕರ್ನಾಟಕ ಅರಣ್ಯ ಇಲಾಖೆ**

ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಕುಂದಾಪುರ ವಿಭಾಗ, ಕುಂದಾಪುರ – 576201

ಕ್ರ.ಸಂ.ಡಿ.ಎಂ.ಎನ್/ವಿವ.50/ಡಿಎಫ್ಎಲ್/2015–16 ದಿನಾಂಕ: 03–12–2016.

ಪರಿಷ್ಕೃತ ಬೇಡಿಕೆ ಪತ್ರ

ಇವರಿಗೆ,

The Executive Engineer,
Project Division,
Panchayath Raj Engineering Department,
1st Floor, Mandavi Towers,
Ambalpady, Udupi – 576103.

ಮಾನ್ಯರೇ,

ವಿಷಯ: Diversion of 1.375 ha. of forest land in Sy. No. 146 of Hengavalli village, Kundapura division, Udupi district for Improvement of road from Hengavalli-Irgi approach to SH road in favour of the Executive Engineer, Panchayath Raj Engineer Department, Udupi-reg.

ಉಲ್ಲೇಖ: 1) ಕೇಂದ್ರ ಸರ್ಕಾರದ ಆದೇಶ ಸಂಖ್ಯೆ.ಎಫ್.ನಂ.4–ಕೆಆರ್‌ಬಿ/1083/2016 ಬೆಂಗಳೂರು/536 ದಿನಾಂಕ: 01–08–2016.
2) ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಪಡೆ ಮುಖ್ಯಸ್ಥರು),
ಬೆಂಗಳೂರು ಇವರ ಪತ್ರ ಸಂಖ್ಯೆ.ಎ5(2)/ಜಿಎಫ್ಎಲ್/ಸಿಆರ್.38/2014–15 ದಿನಾಂಕ: 11–08–2016.
3) ಈ ಕಛೇರಿಯ ಬೇಡಿಕೆ ಪತ್ರದ ಸಮ ಸಂಖ್ಯೆ ದಿನಾಂಕ: 18–08–2016.

* * * * * *

ಕುಂದಾಪುರ ತಾಲೂಕು ಹೆಂಗವಳ್ಳಿ ಇರ್ಗಿಯಿಂದ ಎಸ್.ಹೆಚ್. ರಸ್ತೆಯನ್ನು ಅಭಿವೃದ್ಧಿ ಪಡಿಸಲು ಹೆಂಗವಳ್ಳಿ ಬ್ಲಾಕ್ ಎ, ಬಿ, ಸಿ ಮೀಸಲು ಅರಣ್ಯದ ಹೆಂಗವಳ್ಳಿ ಗ್ರಾಮದ ಸರ್ವೆ ನಂಬ್ರ 146 ರಲ್ಲಿ 1.375ಹೆಕ್ಟೇರ್ ಅರಣ್ಯ ಪ್ರದೇಶವನ್ನು ಅರಣ್ಯ (ಸಂರಕ್ಷಣಾ) ಕಾಯ್ದೆ 1980ರಡಿ ಬಿಡುಗಡೆಗೊಳಿಸುವ ಬಗ್ಗೆ ಸಲ್ಲಿಸಲಾದ ಪ್ರಸ್ತಾವನೆಗೆ ಕೇಂದ್ರ ಸರಕಾರವು ಉಲ್ಲೇಖ (1)ರಂತೆ ಮುಂದಿನ 20 ವರ್ಷಗಳ ಅವಧಿಗೆ ಗುತ್ತಿಗೆ ಮೇಲೆ ನಿಮಗೆ ಬಿಡುಗಡೆಗೊಳಿಸುವ ಕುರಿತಂತೆ ತಾತ್ವಿಕ (Stage-I) ಅನುಮೋದನೆಯಲ್ಲಿ ತಿಳಿಸಿದ ಷರತ್ತಿನಂತೆ ಈ ಕಛೇರಿಯ ಉಲ್ಲೇಖ (3)ರ ಬೇಡಿಕೆ ಪತ್ರದಲ್ಲಿ ಎನ್.ಪಿ.ವಿ. ಮತ್ತು ಪರಿಹಾರಾತ್ಮಕ ನೆಡುತೋಪು ಬೆಳಸುವ ವೆಚ್ಚ ಸೇರಿ ಒಟ್ಟು 20,20,625/– ನ್ನು ಸ್ಟೇಟ್ ಕಾಂಪಾ ಖಾತೆಗೆ ಪಾವತಿಸಲು ತಿಳಿಸಲಾಗಿರುತ್ತದೆ.

ಪರಿಹಾರಾತ್ಮಕ ನೆಡುತೋಪು ಬೆಳೆಸಲು 2.30 ಹೆ. ಪ್ರದೇಶವನ್ನು ಗುರುತಿಸಿದ್ದು, ಅಷ್ಟೇ ವಿಸ್ತೀರ್ಣದಲ್ಲಿ ಪರಿಹಾರಾತ್ಮಕ ನೆಡುತೋಪು ಬೆಳೆಸಲು ತಗಲುವ ವೆಚ್ಚಕ್ಕೆ ಬೇಡಿಕೆ ಪತ್ರ ನೀಡಲಾಗಿರುತ್ತದೆ. ಆದರೆ ಸರಕಾರಿ ಆದೇಶದಲ್ಲಿ ತಿಳಿಸಿದಂತೆ ಬಿಡುಗಡೆಗೊಳಿಸಲಿರುವ ಅರಣ್ಯ ಭೂಮಿಯಷ್ಟೇ ವಿಸ್ತೀರ್ಣದಲ್ಲಿ ಅಂದರೆ 1.375 ಹೆ. ಅರಣ್ಯ ಪ್ರದೇಶದಲ್ಲಿ ಪರಿಹಾರಾತ್ಮಕ ನೆಡುತೋಪು ಬೆಳೆಸುವ ವೆಚ್ಚವನ್ನು ಮಾತ್ರ ಪಡೆಯಬೇಕಾಗಿರುವುದಾಗಿ ನೋಡಲ್ ಅಧಿಕಾರಿ ಹಾಗೂ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಸಂರಕ್ಷಣೆ), ಬೆಂಗಳೂರು ಇವರ ಕಛೇರಿಯ ದಿನಾಂಕ: 02–12–2016 ರಂದು ದೂರವಾಣಿ ಮುಖಾಂತರ ತಿಳಿಸಿದ ಮೇರೆಗೆ ಈ ಕೆಳಗಿನಂತೆ ಪರಿಷ್ಕೃತ ಬೇಡಿಕೆ ಪತ್ರ ನೀಡಲಾಗಿದೆ.

..2/–

| ಕ್ರ ಸಂ | ವಿವರ | ಪರಿಮಾಣ (ಹೆ.ಗಳಲ್ಲಿ) | ಘಟಕ ದರ (ಲಕ್ಷಗಳಲ್ಲಿ) | ಮೊಬಲಗು (ಲಕ್ಷಗಳಲ್ಲಿ) |
|---|---|---|---|---|
| 01 | ಗುತ್ತಿಗೆ ಮೇಲೆ ಬಿಡುಗಡೆಗೆ ಪ್ರಸ್ತಾಪಿಸಿದ 1.375 ಹೆ. ಅರಣ್ಯ ಪ್ರದೇಶಕ್ಕೆ ಪಾವತಿಸಬೇಕಾದ ನಿವ್ವಳ ಮೌಲ್ಯ (ಎನ್.ಪಿ.ವಿ) | 1.375 | 10.43 | 14.34125 |
| 02 | ಪರಿಹಾರಾತ್ಮಕ ನೆಡುತೋಪು ಬೆಳೆಸಲು ಗುರುತಿಸಿದ 2.30ಹೆ. ಅರಣ್ಯೇತರ ಪ್ರದೇಶದಲ್ಲಿ ಪರಿಹಾರಾತ್ಮಕ ನೆಡುತೋಪು ಬೆಳೆಸಲು ತಗಲುವ ವೆಚ್ಚ | 1.375 | 2.55 | 3.50625 |
| | ಒಟ್ಟು | | | **17.8475** |

ಆದುದರಿಂದ ಮೇಲೆ ತಿಳಿಸಿದ ಕ್ರಮ ಸಂಖ್ಯೆ 01 ರಿಂದ 02 ರವರೆಗಿನ ಉದ್ದೇಶಕ್ಕೆ **ಒಟ್ಟು ರೂ.17,84,750/–(ಹದಿನೇಳು ಲಕ್ಷದ ಎಂಬತ್ತ್‌ನಾಲ್ಕು ಸಾವಿರದ ಎಳು ನೂರ ಐವತ್ತು ಮಾತ್ರ)** ಮೊಬಲಗನ್ನು Adhoc – CAMPA through e-payment module of Forest Clearance portal- "forestclearance.nic.in. ನಂತೆ ಪಾವತಿಸಿ ಈ ಕಛೇರಿಗೆ ಮಾಹಿತಿ ನೀಡಲು ತಿಳಿಸಿದೆ. ಹಾಗೂ ಉಳಿದಂತೆ ಈ ಕಛೇರಿಯ ಉಲ್ಲೇಖ (3)ರ ಬೇಡಿಕೆ ಪತ್ರದಲ್ಲಿ ತಿಳಿಸಿದ ಷರತ್ತುಗಳನ್ನು ಪಾಲಿಸಲು ತಿಳಿಸಿದೆ.

ಮೇಲೆ ತಿಳಿಸಿದ ಎಲ್ಲಾ ಷರತ್ತುಗಳನ್ನು ಪಾಲಿಸಿದ ನಂತರವೇ ಅಂತಿಮ (Stage-II) ಆದೇಶದ ಬಗ್ಗೆ ಪ್ರಸ್ತಾವನೆಯನ್ನು ಸಲ್ಲಿಸಲು ಕ್ರಮ ಕೈಗೊಳ್ಳಲಾಗುವುದು.

ತಮ್ಮ ವಿಶ್ವಾಸಿ,

(ಎಂ.ವಿ. ಅಮರನಾಥ)
ಉಪ ಅರಣ್ಯ ಸಂರಕ್ಷಣಾಧಿಕಾರಿ,
ಕುಂದಾಪುರ ವಿಭಾಗ, ಕುಂದಾಪುರ